ಶ್ರೀ ಎಸ್. ಎಂ. ಶೀರ್ನಳ್ಳಿ ಚಂದ್ರಶೇಖರ್.—1963ನೇ ಸಾಲಿನಿಂದಲೂ ಈ ಸಮಸ್ಯೆ ತಮ್ಮ ಇಲಾಖೆಯಲ್ಲಿದೆ. ಈ ರೀತಿ ಇಷ್ಟೊಂದು ವಿಳಂಬವಾಗಿರುವುದರಿಂದ ಅಧಿಕಾರಿಗಳಲ್ಲಿ ಒಂದು ರೀತಿಯ ಮಾನಸಿಕ ಕ್ಲೇಷ ಉಂಟಾಗಿ ಕೆಲಸ ನಿರ್ವಹಣೆಗೆ ಕಷ್ಟವಾಗುವುದಿಲ್ಲವೆ ಸ್ವಾಮಿ ?

†ಶ್ರೀ ಎನ್. ಚಿಕ್ಕೇಗೌಡ.—ಅಷ್ಟೇ ಮಾನಸಿಕ ಕ್ಲೇಷ ಸರ್ಕಾರಕ್ಕೂ ಸಹ ಇದೆ. ಇದರಿಂದ ಸಮಸ್ಯೆಗಳು ಉದ್ಭವಿಸಿರುವುದರಿಂದ ಅನೇಕ ಸಮಸ್ಯೆಗಳು ಇರುವ ಈ ಕಾಲದಲ್ಲಿ ಸರ್ಕಾರ ತೀರ್ಮಾನ ತೆಗೆದುಕೊಂಡಿರುವುದನ್ನು ಕೋರ್ಟಿನಲ್ಲಿ ಪ್ರಶ್ನೆ ಮಾಡಿ ರಿಟ್ ಪಿಟಿಷನ್ಸ್ ಹಾಕಿ ತೀರ್ಮಾನವಾಗಿದೆ ಮತ್ತು ಅವುಗಳಿಗೆ ಅಷ್ಟೇ ಕ್ಲಿಷ್ಟಸಮಸ್ಯೆಗಳು ಉದ್ಭವವಾಗಿವೆ. ಈಗ ರೂಲ್ಸ್ ಬದಲಾವಣೆ ಮಾಡಬೇಕಾದ್ದು ಇದೆ. ಆದ್ದರಿಂದ ಈಗಾಗಲೇ ಎಲ್ಲ ಅಂಕಿಅಂಶಗಳನ್ನು ತರಿಸಿದ್ದೇವೆ. ರೂಲ್ಸ್ ಫಾರಮ್ ಮಾಡುತ್ತಿದ್ದೇವೆ. ಅವರಿಗೆ ನ್ಯಾಯವಾಗಿ ಬಡ್ತಿ ಮತ್ತು ಇತರೆ ಸೌಲಭ್ಯಗಳು ಏನೇನು ಬರಬೇಕೊ ಅವನ್ನು ಕೊಡುತ್ತೇವೆ.

ಶ್ರೀ ಎಸ್. ಎಂ. ಶೀರ್ನಳ್ಳಿ ಚಂದ್ರಶೇಖರ್.—ರೂಲ್ಸ್ ಫಾರಂ ಮಾಡಿ, ವಿನಿಯೋಗವಾಗಿ ಮಾಡಿ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಎಷ್ಟು ದಿವಸ ಬೇಕು ಎಂಬುದನ್ನು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಎನ್. ಚಿಕ್ಕೇಗೌಡ.—ಎಷ್ಟು ದಿವಸಗಳಾಗುತ್ತವೆ ಎಂದು ಹೇಳುವುದಕ್ಕಾಗುವುದಿಲ್ಲ. ಆದಷ್ಟು ಜಾಗ್ರತೆ ತೀರ್ಮಾನ ಮಾಡುತ್ತೇವೆ ಎಂದು ಮಾತ್ರ ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತೇನೆ.

Exemption of Surcharge on Tractors

485. SRI M. B. RAMASWAMY (Anekal).—Will the Minister for Finance and Housing be pleased to state:—

(*a*) whether Government have exempted surcharge only to Tractors ;

(*b*) if so, whether the Government have received any complaints in this behalf ;

(*c*) the nature of complaints ?

SRI M. Y. GHORPADE (Minister for Finance and Housing).—

(*a*) There is no surcharge leviable on Sales Tax.

(*b*) Does not arise.

(*c*) Does not arise.

ಶ್ರೀ ಎಂ. ಬಿ. ರಾಮಸ್ವಾಮಿ.—ಅಧ್ಯಕ್ಷರೆ, ಪ್ರಶ್ನೆ ಕೇಳತಕ್ಕದ್ದು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟದ್ದು. ಟ್ರಾಕ್ಟರ್‌ಗೆ ಮೇಲ್ತೆರಿಗೆಯಿಂದ ವಿನಾಯಿತಿ ಕೊಟ್ಟಿದ್ದಾರೆ ಡೀಸೆಲ್ ಪಂಪ್‌ಗೆ ಕೊಟ್ಟಿಲ್ಲ ಎಂಬ ಉದ್ದೇಶದಿಂದ ಪ್ರಶ್ನೆ ಕೇಳಿರುವುದು.

ಅಧ್ಯಕ್ಷರು.—ಈಗ ಮಾನ್ಯ ಸದಸ್ಯರು ನಮ್ಮ ಪ್ರಶ್ನೆ ಏನು ಎಂಬುದನ್ನು ಹೇಳಬೇಕು.

ಶ್ರೀ ಎಂ ಬಿ ರಾಮಸ್ವಾಮಿ —ನಾನು ಕೇಳುವುದೇನೆಂದರೆ ಟ್ರಾಕ್ಟರುಗಳನ್ನು ಏನು ರೈತರು ಇಟ್ಟಿದ್ದಾರೆ ಅವರಿಗೆ ತೆರಿಗೆ ವಿನಾಯಿತಿ ಕೊಟ್ಟಿದ್ದೀರಿ. ಡೀಸೆಲ್ ಪಂಪ್‌ಗೆ ವಿನಾಯಿತಿ ಮಾಡಿಲ್ಲ. ಅದಕ್ಕೇನಾದರೂ ವಿನಾಯಿತಿ ಮಾಡುತ್ತೀರಾ ?

†ಶ್ರೀ ಎನ್. ಚಿಕ್ಕೇಗೌಡ —ಇತ್ತೀಚಿನ ಗೌರ್ನಮೆಂಟ್ ಆರ್ಡರ್ ಪ್ರಕಾರ ಪಂಪ್‌ಸೆಟ್ಸಿಗೆ ಸಾಲ ತೆಗೆದುಕೊಂಡಿರುವುದಕ್ಕೆ ಪೀನರ್ ಇಂಟರೆಸ್ಟ್ ಮನ್ನಾ ಮಾಡುತ್ತೇವೆ.

ಶ್ರೀ ಎಂ ಬಿ. ರಾಮಸ್ವಾಮಿ.—ಟ್ರಾಕ್ಟರ್‌ಗಳಿಗೆ ನರ್‌ಚಾರ್ಜ್ ಮನ್ನಾ ಮಾಡಿದ್ದೀರಿ, ಡೀಸೆಲ್ ಪಂಪಿಗೆ ಮಾಡಿಲ್ಲ.

ಶ್ರೀ ಎನ್. ಚಿಕ್ಕೇಗೌಡ.—ನರ್‌ಚಾರ್ಜ್‌ಲ್ಲ, ಪೀನರ್ ಇಂಟರೆಸ್ಟ್. ಇದೇ ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಭರವಸೆ ಕೊಟ್ಟಿರುವ ಪ್ರಕಾರ ಡೀಸೆಲ್ ಮತ್ತು ಎಲೆಕ್ಟ್ರಿಕ್ ಪಂಪ್ ಸೆಟ್ಟುಗಳನ್ನು ಇಲಾಖೆಗಳ ಮುಖಾಂತರ ಕೊಟ್ಟಿರುವುದರಿಂದ 6 ತಿಂಗಳಲ್ಲಿ ಕಂತು ಪೂರ್ತಿ ಕಟ್ಟಿದ್ದರೆ, ಆಗ ನುಸ್ಸಿ ಬಡ್ಡಿ ಕಟ್ಟಿದ್ದರೆ ಅದನ್ನು ಸಾಮಾನ್ಯ ಬಡ್ಡಿ ಮತ್ತು ಅನಲಗೆ ವಜಾ ಹಾಕಿ ಕೊಂಡು ನುಸ್ಸಿ ಬಡ್ಡಿ ಮನ್ನಾ ಮಾಡಿದ್ದೇವೆ. 6 ತಿಂಗಳೊಳಗೆ ಕಟ್ಟಬೇಕು ಎಂದು ಸರ್ಕಾರದ ಕುಕುಂ ಹೊರಡಿಸಿದ್ದೇವೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಮಾನ್ಯ ಮಂತ್ರಿಗಳು ಟ್ರಾಕ್ಟರ್ ಮೇಲೆ ಹಾಕಿರತಕ್ಕ ಕುಸ್ಸಿ ಬಡ್ಡಿಯನ್ನು ತೆಗೆದಿದ್ದೇವೆ ಎಂದು ಉತ್ತರ ಹೇಳಿದರು. ಆದರೆ ಅನೇಕ ಕಡೆಗಳಲ್ಲಿ ದೂರುಗಳು ಬರುತ್ತಿವೆ. ಪಂಪ್‌ಸೆಟ್ ಸಾಲ ತೀರಿಸುವುದಕ್ಕೆ ತೊಂದರೆಯಾಗಿವೆ. ಅದನ್ನು ಒಟ್ಟಿಗೆ ಒಂದೇ ಕಂತಿನಲ್ಲಿ ಕಟ್ಟಿದರೆ ರಿಯಾಯಿತಿ ಕೊಡುತ್ತೀರಾ ?

ಅಧ್ಯಕ್ಷರು.—ಕೊಡುತ್ತೇವೆ ಎಂದು ಈಗಾಗಲೇ ಉತ್ತರ ಹೇಳಿದ್ದಾರೆ

ಕ್ಯಾಸಂಬಳ್ಳಿ ಗ್ರಾಮದಲ್ಲಿ ಆರೋಗ್ಯ ಘಟಕದ ಕಟ್ಟಡವನ್ನು ನಿರ್ಮಿಸುವುದು

502. ಶ್ರೀ ಕೆ. ಎಂ. ದೊರೆಸ್ವಾಮಿ ನಾಯ್ಡು (ಬೇತಮಂಗಲ).—ಆರೋಗ್ಯ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ಬಂಗಾರುಪೇಟೆ ತಾಲ್ಲೂಕಿನ ಕ್ಯಾಸಂಬಳ್ಳಿ ಗ್ರಾಮದಲ್ಲಿ ಹೆಲ್ತ್‌ಯೂನಿಟ್ ಬಿಲ್ಡಿಂಗ್ ಮತ್ತು ಕಟ್ಟಡಗಳನ್ನು ಕಟ್ಟಲು ಕಂಟ್ರಾಕ್ಟ್ ಕೊಟ್ಟು ಎಷ್ಟು ವರ್ಷಗಳಾದುವು ;

(ಆ) ಇವುಗಳನ್ನು ಕಟ್ಟುವ ಕೆಲಸ ಇದುವರೆಗೂ ಪೂರ್ತಿಯಾಗದೆ ಇರುವುದಕ್ಕೆ ಕಾರಣವೇನು;

(ಇ) ಈಗ ಅಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿವರ್ಗದವರು ಅಲ್ಲಿಯೆ ಉಳಿದುಕೊಂಡು ಕೆಲಸ ಮಾಡಲು ಕ್ವಾರ್ಟರ್ಸ್ ಇಲ್ಲದಿದ್ದಕ್ಕೆ ತೊಂದರೆಯಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೆ ;

(ಈ) ಈಗ ಸಿಬ್ಬಂದಿ ವರ್ಗದವರು ಸ್ಥಳದಲ್ಲಿಯೇ ಇಲ್ಲದ ಕಾರಣ ಸುತ್ತಮುತ್ತ ಇರುವ ಗ್ರಾಮಗಳ ಜನರಿಗೆ ತೊಂದರೆಯಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ;

(ಉ) ಈ ಕೆಲಸ ಪೂರೈಸಲು ಎಷ್ಟು ದಿನಗಳಾಗಬಹುದು ;

(ಊ) ಈ ಕೆಲಸವನ್ನು ಜಾಗ್ರತೆ ಮುಗಿಸಲು ಸರಕಾರದವರು ಏನು ಕ್ರಮ ಕೈಕೊಂಡಿದ್ದಾರೆ?

ಶ್ರೀ ಸುಭಾಷ್ ಆಸೂರೆ(ದೊಡ್ಡ ಮತ್ತು ಮಧ್ಯಮ ನೀರಾವರಿ ಶಾಖೆಗಳ ರಾಜ್ಯ ಮಂತ್ರಿಗಳು)

[ಶ್ರೀ ಎಚ್. ಸಿದ್ದವೀರಪ್ಪ (ಆರೋಗ್ಯ ಮಂತ್ರಿಗಳು) ಪರವಾಗಿ]

(ಅ) 4 ವರ್ಷಗಳು

(ಆ) ಮೊದಲು ಕೊಟ್ಟ ಕಂಟ್ರಾಕ್ಟರು ಕೆಲಸ ಮುಗಿಸದ ಕಾರಣ

(ಇ) ಬಂದಿದೆ.

(ಈ) ಬಂದಿದೆ.

(ಉ) ಮಾರ್ಚ್ ತಿಂಗಳ ಕೊನೆಗೆ ಮುಗಿಯುವ ನಿರೀಕ್ಷೆ ಇದೆ.

(ಊ) ಲೋಕೋಪಯೋಗಿ ಇಲಾಖೆಯ ಎಕ್ಸಿಕ್ಯೂಟಿವ್ ಇಂಜಿನಿಯರ್, ಕೋಲಾರ ಇವರಿಗೆ ಸೂಚನೆ ನೀಡಿದೆ.